ಆ) 2004ನೇ ಸಾಲಿನಲ್ಲಿ ಒಟ್ಟು 5 ಜನರು ರೈಲು ಗಾಡಿಗೆ ಸಿಕ್ಕಿ ಮೃತಪಟ್ಟಿರುವ ಬಗ್ಗೆ ಬೆಂಗಳೂರು ನಗರ ರೈಲ್ವೆ ಪೊಲೀಸ್ ಠಾಣೆಯಲ್ಲಿ ಕಲಂ–174 ಸಿ.ಆರ್.ಪಿ.ಸಿ. ಪ್ರಕಾರ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿರುತ್ತದೆ.

ಇ) ಶೇಷಾದ್ರಿಪುರಂ, ಕುಮಾರ ಪಾರ್ಕ್‌ಗಳಲ್ಲಿನ ಕಾಲೇಜುಗಳಿಗೆ ಹಾಗೂ ಕಛೇರಿಗಳಿಗೆ ಹೋಗುವವರ ಅನುಕೂಲಕ್ಕಾಗಿ ಈಗಾಗಲೇ ನಿರ್ಮಿಸಲಾಗುತ್ತಿರುವ ವಿಸ್ತರಿಸಿದ ರಸ್ತೆ ಕೇಳಸೇತುವೆ ಒಂದು ಬದಿಯಲ್ಲಿ ಪ್ರತ್ಯೇಕ ಪಾದಚಾರಿ ಮಾರ್ಗವನ್ನು ಈಗಾಗಲೇ ನಿರ್ಮಿಸಲಾಗಿದೆ. ರಸ್ತೆಯ ಇನ್ನೊಂದು ಬದಿ ಪಾದಚಾರಿ ಮಾರ್ಗ ಹಾಗೂ ಕೆಳ ಸೇತುವೆ ಕಾಮಗಾರಿ ಪ್ರಗತಿಯಲ್ಲಿದೆ.

2308(3232) ಶ್ರೀ ಶ್ರೀ ಕಿರಣ್ ಕುಮಾರ್ ಕೆ.ಎಸ್. (ಕಳ್ಳಂಬೆಳ್ಳ):– ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಹಾಗಲವಾಡಿ ಹೋಬಳಿ ಹಾಗೂ ಸುತ್ತುಮುತ್ತಲಿನ ಗ್ರಾಮಗಳಿಗೆ ಕುಡಿಯುವ ನೀರೊದಗಿಸಲು ಹೇಮಾವತಿ ಏತ ನೀರಾವರಿ ಯೋಜನೆ ಅನುಷ್ಠಾನಕ್ಕೆ ಸರ್ಕಾರ ಯೋಜನೆ ರೂಪಿಸಿದೆಯೆ;

ಆ) ಯೋಜನೆ ರೂಪಿಸಿದ್ದು ಯಾವಾಗ;

ಇ) ಯೋಜನೆಗೆ ನಿಗದಿಪಡಿಸಲಾದ ಹಣ ಎಷ್ಟು ಹಾಗೂ ಕಾಮಗಾರಿ ಯಾವ ಹಂತದಲ್ಲಿದೆ;

ಈ) ಯೋಜನೆಯ ಕಾಮಗಾರಿಯನ್ನು ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಗೆ ಒಳಪಡಿಸಲಾಗಿದೆಯೆ;

ಉ) ಕಾಮಗಾರಿ ಪ್ರಾರಂಭವಾಗುವುದು ಯಾವಾಗ;

ಊ) ಕಾಮಗಾರಿ ಪ್ರಾರಂಭಗೊಳಿಸುವಲ್ಲಿ ಕಾವೇರಿ ನೀರಾವರಿ ನಿಗಮ ಕೈಗೊಂಡಿರುವ ಕ್ರಮಗಳಾವುವು;

ಋ) ಕಾಮಗಾರಿ ವಿಳಂಬವಾಗಲು ಕಾರಣಗಳೇನು;

ಋ) ಕಾಮಗಾರಿ ಯಾವಾಗ ಪೂರ್ಣಗೊಳ್ಳಲಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):–

ಅ) ರೂಪಿಸಿದೆ

ಆ) ಸರ್ಕಾರಿ ಆದೇಶ ಸಂಖ್ಯೆ: ಜಸಂಇ 186 ಎನ್‌ಹೆಚ್‌ಪಿ 2000 ದಿ:8–10–03 ರಂದು ನೀರು ಒದಗಿಸುವ ಪ್ರಸ್ತಾವನೆಗೆ ಜಲ ಸಂಪನ್ಮೂಲ ಇಲಾಖೆಯ ಸಹಮತಿ ನೀಡಲಾಗಿದೆ.

ಇ&ಈ&ಉ) ನಾಲೆಯಿಂದ ನೀರನ್ನು ಕುಡಿಯುವ ಸಲುವಾಗಿ ನಿಗಮದಿಂದ ಅನುಮತಿ ನೀಡಿದ್ದು ಸಂಬಂಧಿಸಿದ ಕಾಮಗಾರಿಗಳ ನಿರ್ವಹಣೆ ಜಿಲ್ಲಾ ಪಂಚಾಯತ್ ತುಮಕೂರು ಇವರ ವ್ಯಾಪ್ತಿಗೆ ಬರುವುದರಿಂದ ಸದರಿ ಕಾಮಗಾರಿಗಳ ಬಗ್ಗೆ ಕ್ರಮ ಕೈಕೊಳ್ಳಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರಿಗೆ ಕೋರಲಾಗಿದೆ.

ಊ&ಐ) ರೇಖಾ ಅಂದಾಜು ರೂ. 28 ಕೋಟಿಗಳಿಗೆ ತಯಾರಿಸಿ ವಿವರವಾದ ಅಂದಾಜು ಪತ್ರಿಕೆ ತಯಾರಿಕೆ ಹಂತದಲ್ಲಿದೆ ಎಂದು ಜಿಲ್ಲಾ ಪಂಚಾಯತ್, ತುಮಕೂರುರವರು ವರದಿ ಮಾಡಿರುತ್ತಾರೆ.

ಋ) ಈ ಬಗ್ಗೆ ಜಿಲ್ಲಾ ಪಂಚಾಯತ್ ಇಲಾಖೆಯಿಂದ ಮಾಹಿತಿ ಸ್ವೀಕೃತವಾಗಿರುವುದಿಲ್ಲ.

2309(2131) ಶ್ರೀ ಕೃಷ್ಣಪಾಲೇಮಾರ್ ಜೆ. (ಸುರತ್ಕಲ್):- ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಂಗ್ರಹವಾಗಿರುವ ಮೋಟಾರು ವಾಹನ ತೆರಿಗೆ ಎಷ್ಟು;

ಆ) ಸಂಗ್ರಹಿತ ಮೋಟಾರು ವಾಹನ ತೆರಿಗೆಯ ಎಷ್ಟು ಭಾಗವನ್ನು ಮಂಗಳೂರು ಮಹಾನಗರ ಪಾಲಿಕೆಗೆ ಕೊಡಬೇಕೆನ್ನುವ ನಿಯಮವಿದೆ; ಆ ಪ್ರಕಾರ ಎಷ್ಟು ಹಣವನ್ನು ಪಾಲಿಕೆಗೆ ನೀಡಲಾಗಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ)

ವರ್ಷ	ಸಂಗ್ರಹಿಸಲಾದ ಮೋಟಾರು ವಾಹನ ತೆರಿಗೆ (ರೂ. ಲಕ್ಷಗಳಲ್ಲಿ)
2001–02	1890.06
2002–03	2035.15
2003–04	2215.76

ಆ) ಈ ಬಗ್ಗೆ ನಿಯಮ ಇರುವುದಿಲ್ಲ.

2310(2132) ಶ್ರೀ ಕೃಷ್ಣಪಾಲೇಮಾರ್ ಜೆ. (ಸುರತ್ಕಲ್):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಸಿದ್ಧ ರಕ್ಷಿತಾರಣ್ಯ ಕುದುರೆಮುಖ ಪ್ರದೇಶದಲ್ಲಿ ಎಷ್ಟು ಜನರಿಗೆ ಗಣಿಗಾರಿಕೆಗೆ ಪರವಾನಿಗೆ ನೀಡಲಾಗಿದೆ; ಸದರಿ ಪರವಾನಿಗೆಯ ಅವಧಿ ಎಷ್ಟು;

ಆ) ಪರವಾನಿಗೆಯನ್ನು ವಿಸ್ತರಿಸುವ ಕುರಿತಾಗಿ ಸರ್ಕಾರ ತೀರ್ಮಾನಿಸಿದೆಯೇ; ವಿಸ್ತರಣೆ ಕುರಿತಾದ ಸರ್ಕಾರದ ನಿಲುವುಗಳೇನು;

ಇ) ಕುದುರೆಮುಖ ರಕ್ಷಿತಾರಣ್ಯ ಪ್ರದೇಶದಲ್ಲಿ ಗಣಿಗಾರಿಕೆಗೆ ಅನುಮತಿಸುವುದು ನ್ಯಾಯ ಸಮ್ಮತವೇ?

ಶ್ರಿ ಧರ್ಮಸಿಂಗ್ (ಮುಖ್ಯ ಮಂತ್ರಿಗಳು):-

ಅ) ಕುದುರೆಮುಖ ಅರಣ್ಯ ಪ್ರದೇಶದಲ್ಲಿ ಮೆ:ಕುದುರೆಮುಖ ಕಬ್ಬಿಣದ ಅದಿರು ಕಂಪನಿ ನಿಯಮಿತ ಸಂಸ್ಥೆಗೆ ಮಾತ್ರ ಕಬ್ಬಿಣದ ಅದಿರು ತೆಗೆಯಲು ಪರವಾನಗಿ ನೀಡಲಾಗಿದೆ. ಈ